

ಡಾ.ವಿನೋದ ಛೆಬ್ಬಿ

**ಪುರುಷ ಪ್ರಧಾನ ಸಂಸ್ಕೃತಿಯು ಲೈಂಗಿಕ ವಿಜ್ಞಾನದ ಸಂಶೋಧನೆಗಳ ಮೇಲೂ ತನ್ನ ಪ್ರಭಾವ ಬೀರಿದೆ!**

# 199: ಪುರುಷರ ನಾಕನರಕ-8

ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಕಾಮಕೂಟದಲ್ಲಿ ಪಾರಮ್ಯವನ್ನು ಸಾಧಿಸಲು ಗಂಡಿಗೂ, ಗಂಡಿನ ಪಾರಮ್ಯವನ್ನು ಒಪ್ಪಿಕೊಳ್ಳಲು ಹೆಣ್ಣಿಗೂ ಹೇಳಿಕೊಡಲಾಗಿದೆ; ಹಾಗೂ ಈ ಮಾದರಿಯನ್ನು ಒಪ್ಪಿಕೊಂಡು ಗಂಡು ಕೊಟ್ಟಷ್ಟು ಸುಖಪಡುವ ಹೆಂಗಸರ ದಾಂಪತ್ಯವು ಚೆನ್ನಾಗಿ ನಡೆಯುತ್ತದೆ ಎಂದು ಹೇಳುತ್ತಿದ್ದೆ.

ನನ್ನ ಈ ವಾದವನ್ನು ಪುರುಷ ಪ್ರಧಾನ ದಾಂಪತ್ಯದಲ್ಲಿರುವ ಕೆಲವು ಹೆಂಗಸರೇ ಒಪ್ಪಿಕೊಳ್ಳಲಿಕ್ಕಿಲ್ಲ. ಇಂಥವರ ಆಲೋಚನೆಯು ಎರಡು ದಿಕ್ಕುಗಳಲ್ಲಿ ಸಾಗುತ್ತದೆ.

ಒಂದು: ಹೆಂಗಸರಾಗಿ ನಮಗೆ ಕಾಮಕೂಟದಲ್ಲಿ ಸಿಗಲಾರದ ಸುಖವು ಕೌಟುಂಬಿಕ ಭದ್ರತೆಯಲ್ಲಿ ಸಿಗುತ್ತದೆ. ಭದ್ರತೆಯ ಸಲುವಾಗಿ ಸ್ವಂತದ ಕಾಮಸುಖವನ್ನು ತ್ಯಾಗ ಮಾಡುವುದು ದೊಡ್ಡದೇನಲ್ಲ.

ಇವರಿಗೆ ನನ್ನ ಪ್ರಶ್ನೆ: ಒಂದುವೇಳೆ ಕೌಟುಂಬಿಕ ಭದ್ರತೆಯ ಜೊತೆಗೆ ಕಾಮತೃಪ್ತಿಯೂ ಸಿಗುತ್ತಿದ್ದರೆ ನಿಮ್ಮ ಬದುಕು ಹೇಗಿರುತ್ತಿತ್ತು? ನಿಜವಾಗಿ ಹೇಳಬೇಕೆಂದರೆ, ಕಾಮತೃಪ್ತಿಯೇ ಬೇರೆ, ಕೌಟುಂಬಿಕ ತೃಪ್ತಿಯೇ ಬೇರೆ. ಒಂದರ ಕೊರತೆಯನ್ನು ಇನ್ನೊಂದನ್ನು ಹೆಚ್ಚಿಸುವುದರ ಮೂಲಕ ಭರ್ತಿ ಮಾಡಲು ಆಗುವುದಿಲ್ಲ. ಹಾಗಾಗಿ ಬಿಟ್ಟುಕೊಟ್ಟಿದ್ದು ತ್ಯಾಗವಲ್ಲ, ಬಲಿದಾನ ಆಗುತ್ತದೆ. ಅಷ್ಟಲ್ಲದೆ, ಕೂಟದಲ್ಲಿ ತನ್ನನ್ನು ಪೂರ್ತಿ ಕೊಟ್ಟುಕೊಂಡರೂ ಮರೀಚಿಕೆಯಾಗುವ ಕಾಮಸುಖವನ್ನು ನೆನಪಿಸಿಕೊಂಡರೆ ಎಂಥದ್ದೇ ಭದ್ರ ಕುಟುಂಬದ ಹೆಣ್ಣಿಗೂ ವ್ಯಗ್ರತೆ, ಸಂಕಟ ಕಾಡುತ್ತದೆ.

ಎರಡು: ಪುರುಷ ಪ್ರಧಾನ ಕುಟುಂಬದ ಕೆಲವು ಹೆಂಗಸರು ಹೇಳುವುದೇನೆಂದರೆ, ಹೆಣ್ಣಾಗಿ ನನಗೆ ಕೆಲವು ಸಲವಾದರೂ ಕಾಮತೃಪ್ತಿ ಆಗಿದೆ; ಇದನ್ನು ಹೇಗೆ ಅಲ್ಲಗಳೆಯಲಾದೀತು? ನಿಜ. ನಿಮಗೆ ತೃಪ್ತಿ ಸಿಕ್ಕಿದೆ, ಸಂತೋಷ. ಆದರೆ ನನ್ನದೊಂದು ಪ್ರಶ್ನೆ: ನಿಮಗೆ ಸಿಕ್ಕಿದ್ದು ಸಂಪೂರ್ಣ ತೃಪ್ತಿಯೇ ಎಂದು ಹೇಗೆ ಹೇಳಬಲ್ಲಿರಿ? ಹಾಗೂ, ಹೆಚ್ಚಿನ ಸಂಖ್ಯೆಯ ಕೂಟಗಳಲ್ಲಿ ಇದನ್ನು ಅನುಭವಿಸಿದ್ದೀರಾ? ಹೀಗೆ ಪ್ರಶ್ನಿಸುವುದಕ್ಕೆ ಕಾರಣವಿದೆ. ಗಂಡಿನ ಶೀಘ್ರಸ್ಖಲನದ ಅಧ್ಯಯನ ಹಾಗೂ ಪರಿಹಾರ ಕಂಡುಹಿಡಿಯುವ ದಿಕ್ಕಿನಲ್ಲಿ ಲೈಂಗಿಕ ಶಾಸ್ತ್ರಜ್ಞರಾದ ಮಾಸ್ಟರ್ಸ್ ಹಾಗೂ ಜಾನ್ಸನ್ (**Masters and Johnson**) ದ್ವಯರು ಏನು ತೀರ್ಮಾನಕ್ಕೆ ಬಂದಿದ್ದಾರೆ ಗೊತ್ತೆ? ಶೀಘ್ರಸ್ಖಲನಿಯ ಸಂಗಾತಿಯು ಸುಮಾರು ಶೇ. 50ರಷ್ಟು ಕಾಮಕೂಟಗಳಲ್ಲಿ ತೃಪ್ತಿ ಹೊಂದಿದರೆ ಅದು 'ಶೀಘ್ರ'ಸ್ಖಲನ ಎನ್ನಿಸಿಕೊಳ್ಳಲಾರದು! ಬಿಡಿಸಿ ಹೇಳಬೇಕೆಂದರೆ, ನಿಮ್ಮ ಗಂಡ ಸಂಭೋಗದಲ್ಲಿ ನೂರಕ್ಕೆ ನೂರು ಸಲ ತೃಪ್ತಿ ಹೊಂದುವಾಗ ನಿಮಗೆ ಐವತ್ತರಲ್ಲಿ ಸುಖ ಸಿಕ್ಕರೆ ತೆಪ್ಪಗೆ ಒಪ್ಪಿಕೊಳ್ಳಿ! ಇದೇ ಮಾತನ್ನು ತಿರುಗಿಸಿ ಪುರುಷರಿಗೇ ಅನ್ವಯಿಸುವ ಹಾಗಿದ್ದರೆ ಹೇಗಿರುತ್ತದೆ? ಅಂದರೆ, 'ಶೇ. 50ರಷ್ಟು ಸಂಭೋಗಗಳಲ್ಲಿ ಗಂಡಸರಿಗೆ ಕಾಮತೃಪ್ತಿ ಹೊಂದಿದರೆ ಪುರುಷರ ಲೈಂಗಿಕ ಜೀವನ ತೃಪ್ತಿಕರ ಎನ್ನಬಹುದು' ಎಂದು ನಾನು ಶಿಫಾರಸು ಮಾಡಿದರೆ ಗಂಡಸರೆಲ್ಲ ನನ್ನೊಡನೆ ಜಗಳಕ್ಕೆ ಬರಬಹುದು! ಹೀಗೆ ವಸ್ತುನಿಷ್ಠವಾದ ವೈಜ್ಞಾನಿಕ ಸಂಶೋಧನೆಗಳಲ್ಲೂ ಪುರುಷ ಪ್ರಧಾನ ಸಂಸ್ಕೃತಿಯ ಪ್ರಭಾವ ಕಾಣುತ್ತಿದ್ದು, ಹೆಂಗಸರ ಬಯಕೆಗಳನ್ನು ಗಂಡಿನ ಕಣ್ಣಿನಿಂದಲೇ ನೋಡಲಾಗಿದೆ ಎಂಬುದು ದುರಂತ. ಹೆಣ್ಣಿಗೆ ವಾಸ್ತವವಾಗಿ ಸಿಗುತ್ತಿರುವುದು ಏನು, ಹಾಗೂ ಎಷ್ಟರ ಮಟ್ಟಿಗೆ ಎನ್ನುವುದರ ಬಗೆಗೆ ಯಾರೂ ತಲೆಕೆಡಿಸಿಕೊಂಡಂತಿಲ್ಲ. ವಿಚಿತ್ರ ಎಂದರೆ ಇದೇ ಅಧ್ಯಯನದಲ್ಲಿ ಹೆಣ್ಣು ಒಂದು ಕೂಟದಲ್ಲಿ ಹಲವು ಸಲ ಭಾವಪ್ರಾಪ್ತಿ (**orgasm**) ಹೊಂದಬಲ್ಲಳು ಎಂದೂ ಕಂಡುಬಂದಿದೆ. ತನ್ನವಳಿಗೆ ಅರ್ಧಕ್ಕರ್ಧ ಸಂಭೋಗಗಳಲ್ಲಿ ತೃಪ್ತಿ ಕೊಡುತ್ತಿದ್ದೇನೆ ಎಂದು ಸಮಾಧಾನ ಪಟ್ಟುಕೊಳ್ಳುವ ಗಂಡಸರು ಯಾವೊತ್ತಾದರೂ ಆಕೆಗೆ ಬಹುಭಾವಪ್ರಾಪ್ತಿ ಸಿಗುವಂತೆ ನೋಡಿದ್ದಾರೆಯೆ?

ವಾಸ್ತವ ಹೀಗಿದ್ದರೂ ಪುರುಷ ಪ್ರಧಾನ ದಾಂಪತ್ಯದಲ್ಲಿ ಹೆಂಗಸರು ತಮಗೆ ಸಾಕಷ್ಟು ಕಾಮತೃಪ್ತಿ ಸಿಗುತ್ತಿದೆ ಎಂದು ಅಂದುಕೊಂಡಿರುವುದಕ್ಕೆ ಕಾರಣವೇನು? ಕ್ಷಮಿಸಿ, ಅತಿರೇಕದ ಉಪಮಾನವನ್ನೇ ಕೊಡುತ್ತಿದ್ದೇನೆ. ನನ್ನ ಪ್ರಕಾರ ಇದೊಂದು ರೀತಿ ಸ್ಟಾಕ್‌ಹೋಮ್ ಸಿಂಡ್ರೋಮ್ (**Stockholm syndrome**). ಅಂದರೆ ವಿಮಾನ ಅಪಹರಣದ ಪ್ರಕರಣಗಳಲ್ಲಿ ಒತ್ತೆಯಾಳುಗಳಾಗಿ ಬದುಕಿ ಬಂದವರ ಪೈಕಿ ಕೆಲವರು ಅಪಹರಣಕಾರರ ಬಗೆಗೆ ಕೃತಜ್ಞತೆ, ಸಹಾನುಭೂತಿ ತೋರಿಸುವುದು ಕಂಡುಬಂದಿದೆ. ಯಾಕೆ? ಕುಳಿತಲ್ಲಿಂದ ಅಲುಗಾಡಿದರೆ ಬೆದರಿಸುವ ಕ್ರೂರಿಗಳು ಕರುಣೆದೋರಿ ಮಲಮೂತ್ರಕ್ಕೆ ಹೋಗಲು ಅನುಮತಿ ಕೊಟ್ಟು ಮರ್ಯಾದೆ ಉಳಿಸಿದರಲ್ಲ, ಎಂಥ ಮಹಾನುಭಾವರು ಇವರು!

ಇದೇ ಮಾತು ಪುರುಷ ಪ್ರಧಾನ ಕುಟುಂಬದಲ್ಲಿ ಬೆಳೆದ ಹೆಣ್ಣಿನ ಬದುಕಿಗೆ ಅನ್ವಯಿಸುತ್ತದೆ. ಇಷ್ಟು ವರ್ಷ ಆಕೆಗೆ ಭದ್ರತೆ, ಪೋಷಣೆ ಕೊಡುತ್ತ ಕಾಮದ ಮುಕ್ತ ಅಭಿವ್ಯಕ್ತಿಯನ್ನು ನಿಷೇಧಿಸಿದ್ದ ಹಿರಿಯರು ಈಗ ಮನಸ್ಸು ಬದಲಾಯಿಸಿ ಒಂದು ಗಂಡಿನ ಎದುರು ಬೆತ್ತಲಾಗಲು ಅವಕಾಶ ಕೊಡುತ್ತಿದ್ದಾರೆ. ಇದು ತೃಪ್ತಿಯಲ್ಲದೆ ಇನ್ನೇನು? ಹೀಗೆ ಕಟ್ಟುಭದ್ರತೆಯಿಂದ ಮುಕ್ತ ಸಾಧ್ಯತೆಯ ಕಡೆಗೆ ಇಡುವ ಮೊದಲ ಹೆಜ್ಜೆ ಹೆಣ್ಣಿಗೆ ಖಂಡಿತವಾಗಿಯೂ ಅಪ್ಯಾಯ ಆಗುತ್ತದೆ.

ಇದಕ್ಕೊಂದು ದೃಷ್ಟಾಂತ: ಹಳ್ಳಿಯ ಬಡಕುಟುಂಬದ ನಾಲ್ಕು ಗೋಡೆಗಳ ನಡುವೆ ಇದ್ದ ಇವಳನ್ನು ಕೊಳೆಯುವಷ್ಟು ಸಂಪತ್ತಿರುವ ಗಂಡಿಗೆ ಕೊಡಲಾಗಿದೆ. ಕಾಯಿಲೆ ಆದರೂ ತಡವಾಗಿ ಮಲಗಿ ಬೇಗನೆದ್ದು 20 ಜನರ ಮನೆಯನ್ನು ಒಬ್ಬಳೇ ನಿಭಾಯಿಸುತ್ತಾಳೆ. ಗಂಡ ಹೊರಹೆಣ್ಣುಗಳನ್ನು ಸಂಪರ್ಕಿಸಿ ಅಂಟಾದ ಜನನಾಂಗವನ್ನು ಹತ್ತಿರ ತಂದಾಗ ನಿಷ್ಠೆ ತೋರಿಸದಿದ್ದರೆ ಶಿಕ್ಷೆ ಕಾದಿರುತ್ತದೆ. ಒಮ್ಮೆ ಆಕೆ ಊಟ ಮಾಡುತ್ತಿರುವಾಗ ಮಾವನ ಕುಮ್ಮಕ್ಕಿನಿಂದ ಗಂಡ ಬಡಿಯಲು ಶುರುಮಾಡಿದ. ಬೆನ್ನಮೇಲೆ ಏಟುಗಳ ಸುರಿಮಳೆ ಆಗುತ್ತಿದ್ದರೆ ಆಕೆ ತಟ್ಟೆ ಬಿಟ್ಟೆದ್ದಳೆ? ಇಲ್ಲ, ಬದಲಾಗಿ ಕತ್ತು ಬಗ್ಗಿಸಿ ಗಬಗಬನೇ ತಿನ್ನಲು ಶುರುಮಾಡಿದಳು – ನಾಚಿಕೆ ಇಲ್ಲದವಳು ಎಂದು ಇನ್ನಷ್ಟು ಏಟು ತಿಂದಳು. ಕಾರಣ ತಿಳಿದು ನನ್ನೆದೆ ಕಲ್ಲಾಯಿತು. ಊಟ ಬಿಟ್ಟುಬಿಟ್ಟರೆ ಸುಸ್ತಾಗಿ, ಮರುದಿನ ಕೆಲಸ ಮಾಡಲು ಆಗದಿದ್ದರೆ ಮನೆಬಿಟ್ಟು ಹೊರಗೆ ಹಾಕುತ್ತಾರೆ. ಬೀದಿಗೆ ಬಿದ್ದ ತನ್ನನ್ನು ಹೊರಗಿನ ಗಂಡಸರು ರೇಪ್ ಮಾಡಿದರೆ? ಪರಪುರುಷ ಅನ್ನಿಸುವ ಯಾವುದೇ ವ್ಯಕ್ತಿಯ ಬಗೆಗೆ ಆಕೆಗೆ ಇಷ್ಟೊಂದು ಭಯ ಇರಬೇಕಾದರೆ ಗಂಡನಿಂದ ಆಗುವ ಅತ್ಯಾಚಾರವು ಬಹುಶಃ ಆಕೆಗೆ ಸುಖವೇ ಅನ್ನಿಸೀತು. ಹದಿನೈದು ವರ್ಷದ ನನ್ನಮ್ಮನನ್ನು ಸರಕಾರಿ ನೌಕರ ಎನ್ನುವ ಒಂದೇ ಕಾರಣಕ್ಕೆ ಮೂವತ್ತು ವರ್ಷದ, ನಾಲ್ಕು ಮಕ್ಕಳಿರುವ ವಿಧುರನಿಗೆ ಒತ್ತಾಯದಿಂದ ಮದುವೆ ಮಾಡಿ ಕೊಡಲಾಯಿತು. ಆಕೆಗೆ ಕಾಮಸುಖ ಎಂದು ಗೊತ್ತಾಗಿದ್ದು ಎರಡು ಮಕ್ಕಳು ಹಾಗೂ ಆರು ವರ್ಷ ಆದ ನಂತರವೇ.

ಇದರ ತಾತ್ಪರ್ಯವೇನು? ಪುರುಷ ಪ್ರಧಾನ ಕುಟುಂಬಗಳ ದಂಪತಿಗಳಲ್ಲಿ ಕಾಮಕೂಟ ನಡೆಯುವಾಗ ಗಂಡಿನ ಸುಖವು ಜನನಾಂಗದಿಂದ ಬರುತ್ತಿದ್ದರೆ ಹೆಣ್ಣಿನ ಸುಖವು ಹೆಚ್ಚಿನಂಶ ಗಂಡು ಕೊಡುವ ಕೌಟುಂಬಿಕ ಭದ್ರತೆಯಿಂದ ಬರುತ್ತದೆ. ಹಾಗಾಗಿ ಕಾಮದಲ್ಲಿ ಸಿಕ್ಕಿದ್ದೇ ಚರಮ ತೃಪ್ತಿ ಎಂದು ಹೆಣ್ಣು ಭಾವಿಸುವ ಸಂಭವವಿದೆ.

ಇಷ್ಟಾಗಿಯೂ ತಮಗೆ ತೃಪ್ತಿ ಸಿಕ್ಕಿದೆ ಎಂದು ಸಾಧಿಸುವ ಹೆಂಗಸರಿಗೆ ಒಂದು ಸವಾಲು: ನಿಮಗೆ ಯಾವುದೇ ಒಂದು ಕೂಟದಲ್ಲಿ ಒಂದಕ್ಕಿಂತ ಹೆಚ್ಚು ಸಲ ಭಾವಪ್ರಾಪ್ತಿ ಆಗಿದೆಯೆ? ಹೋಗಲಿ, ಅದಕ್ಕಾಗಿ ಪ್ರಯತ್ನವಾದರೂ ಮಾಡಿದ್ದೀರಾ?

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.